ದಿನಾಂಕ: 28.10.2021 ರಂದು ಬೆಳಗ್ಗೆ 11.00 ಗಂಟೆಗೆ ರಾಜಾಜಿನಗರ ವಾರ್ಡ್ ನಂ. 99 ರಲ್ಲಿ ಶ್ರೀ ಹೆಚ್.ವಿ. ಅಶ್ವತ್ಥ್ ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ಹೆಚ್.ವಿ. ಅಶ್ವತ್ಥ, ನೋಡಲ್ ಅಧಿಕಾರಿಗಳು
2. ಶ್ರೀ ಯೋಗೇಶ್.ಕೆ.ಪಿ. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು
3. ಶ್ರೀ ಸುಭಾಸ್ ಪಾಟೀಲ್, ಸಹಾಯಕ ಅಭಿಯಂತರರು, ವಾರ್ಡ್ ನಂ. 99
4. ಶ್ರೀಮತಿ ಸುಮಲತಾ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಎಸ್.ಡಬ್ಲ್ಯೂ.ಎಂ.
5. ಶ್ರೀಮತಿ ಆಶಾ. ಸ.ಕಾ.ನಿ.ಅ , ಬೆಸ್ಕಾಂ
6. ಶ್ರೀಮತಿ ಸುನಿತಾ, ಸ.ಅ. ಬೆಸ್ಕಾಂ
7. ಶ್ರೀಮತಿ ಡಾ: ರೂಪಶ್ರೀ, ಹಿರಿಯ ಪ್ರಾಥಮಿಕ ಆರೋಗ್ಯ ಕೇಂದ್ರ,
8. ಶ್ರೀ ನಾಗರಾಜ್.ಕೆ.ಬಿ. ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
9. ಶ್ರೀ ಸೈಯದ್ ಜಮೀಲ್, ಕಿರಿಯ ಅಭಿಯಂತರರು [ವಿದ್ಯುತ್]
10. ಶ್ರೀ ಶಿವರಾಮಯ್ಯ, ಎ.ಎಸ್.ಐ. ಸಂಚಾರಿ
11. ಶ್ರೀ ಆನಂದ್.ಹೆಚ್.ವಿ. ಸಹಾಯಕ್ ಅಭಿಯಂತರರು , ಬೆಸ್ಕಾಂ
12. ಶ್ರೀ ಜಿ.ಸಿ. ಲೋಕೇಶ್ ಅಸೆಸರ್
13. ಶ್ರೀ ಕುಬೇರ್. ಪಿ.ಎಸ್.ಐ. ಬಸವೇಶ್ವರನಗರ
14. ಶ್ರೀಮತಿ ದಿವ್ಯಾ, ಹಿರಿಯ ಆರೋಗ್ಯ ಪರಿವೀಕ್ಷಕರು
15. ಶ್ರೀ ರಮೇಶ್. ಎ.ಹೆಚ್. ಬಿ.ಬಿ.ಎಂ.ಪಿ.
16. ಶ್ರೀ ರಘು, ಕಿರಿಯ ಆರೋಗ್ಯ ಪರಿವೀಕ್ಷಕರು
17. ಶ್ರೀ ಕಾಂತರಾಜ್.ಎಂ. ಹೆಚ್.ಸಿ.
18. ಶ್ರೀ ಶಿವರಾಮ್, ಅರಣ್ಯ ಅಧಿಕಾರಿ
19. ಶ್ರೀ ರಮೇಶ್. ಎಸ್.ವಿ.ಜಿ.
20. ಶ್ರೀ ಮಲ್ಲಿಕಾರ್ಜು, ಎಂ.ಆರ್.
21. ಶ್ರೀ ರಮೇಶ್. ಎನ್. ಮಾರ್ಷಲ್
22. ಶ್ರೀ ಶ್ರೀನಿವಾಸ.ಎನ್.
23. ಶ್ರೀ ಶಿವಹೊನ್ನಯ್ಯ, ಸ್ಯಾನಿಟರಿ ದಫೇದಾರ್,
24. ಶ್ರೀ ಸುರೇಶ್‌ಗಡಗೋಳಿ, ಸದಸ್ಯರು
25. ಶ್ರೀ ಶ್ರೀ ರಾಜಣ್ಣ , ಸದಸ್ಯರು
26. ಶ್ರೀ ಉಮೇಶ್, ಸದಸ್ಯರು

1. ವಾರ್ಡ್ ಕಮಿಟಿ ಸಭೆಗೆ ಪ್ರಪ್ರಥಮ ಬಾರಿಗೆ ಮಾನ್ಯ ಶ್ರೀ ಎಸ್. ಸುರೇಶ್ ಕುಮಾರ್, ರಾಜಾಜಿನಗರ ಕ್ಷೇತ್ರದ ಶಾಸಕರು ಹಾಗೂ ಮಾಜಿ ಮಂತ್ರಿಗಳು, ಕರ್ನಾಟಕ ಸರ್ಕಾರ ರವರು ನೋಡಲ್ ಅಧಿಕಾರಿಗಳೊಂದಿಗೆ ಹಾಗೂ ವಾರ್ಡ್ ಕಮಿಟಿಯ ಸದಸ್ಯರು ಮತ್ತು ನೌಕರರುಗಳೊಂದಿಗೆ ಆಸೀನರಾಗಿರುತ್ತಾರೆ ಎಂಬ ಮಾಹಿತಿಯನ್ನು ಸಭೆಯಲ್ಲಿ ಗೌರವಾನ್ವಿತವಾಗಿ ಸ್ವಾಗತಿಸಲಾಯಿತು. ಹಾಗೂ ಸಭೆಯನ್ನು ಪ್ರಾರಂಭಿಸಲು ಕೋರಲಾಯಿತು.
2. ವಾರ್ಡಿನ ಸದಸ್ಯರು ಸಭೆಯಲ್ಲಿ ಇ.ಎಸ್.ಐ. ಆಸ್ಪತ್ರೆಯ ಸುತ್ತ ಮುತ್ತಲಿನ ಹಾಗೂ ವಾರ್ಡಿನ ಬೀದಿ ದೀಪಗಳು ಉರಿಯುತ್ತಿಲ್ಲ ಎಂದು ಚರ್ಚಿಸಲಾಯಿತು. ಅದಕ್ಕೆ ಉತ್ತರವಾಗಿ ನೋಡಲ್ ಅಧಿಕಾರಿಗಳು ವಿದ್ಯುತ್ ಅಭಿಯಂತರರಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು ಹಾಗೂ 2 ದಿನಗಳಲ್ಲಿ ಸರಿ ಮಾಡದೆ ಇದ್ದರೆ ಬಿಲ್ಲಿನಲ್ಲಿ ಕಟ್ ಮಾಡಲಾಗುವುದು ಹಾಗೂ ಇದಕ್ಕೆ ವಿದ್ಯುತ್ ಅಭಿಯಂತರರೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದೆಂದು ಸಭೆಗೆ ತಿಳಿಸಿದರು. ಇದಕ್ಕೆ ವಿದ್ಯುತ್ ಅಭಿಯಂತರರು ಮುಂದಿನ ಕ್ರಮ ಗೊಳ್ಳುವುದಾಗಿ ತಿಳಿಸಿದರು.
3. ವಾರ್ಡಿನ ಸದಸ್ಯರು ಸಭೆಯಲ್ಲಿ ಹಸಿ ಒಣಕಸದ ಬಗ್ಗೆ ಚರ್ಚಿಸಲಾಯಿತು. ಇದಕ್ಕೆ ಉತ್ತವಾಗಿ ಘನತ್ಯಾಜ್ಯ ವಿಲೇವಾರಿ ಅಭಿಯಂತರರು ಈಗಾಗಲೇ ಹಸಿ ಮತ್ತು ಒಣ ಕಸವನ್ನು ಬೇರ್ಪಡಿಸಿ ಡಂಪಿಂಗ್ ಯಾರ್ಡ್ ಗೆ ಕಳುಹಿಸಲಾಗುತ್ತಿದೆ ಎಂದು ತಿಳಿಸಿದರು
4. ಶ್ರೀ ರಾಜಣ್ಣ ಮತ್ತು ಉಮೇಶ್, ಸದಸ್ಯರು ಎಲ್.ಐ.ಸಿ. ಕಾಲೋನಿಯಲ್ಲಿ ನಡೆಯುತ್ತಿರುವ ಸಿ.ವಿ.ಎಲ್. ಕಾಮಗಾರಿಯು ವಿಳಂಭವಾಗಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಿದರು. ಇದಕ್ಕೆ ಉತ್ತರವಾಗಿ ಸ.ಕಾ.ನಿ.ಅ ಹಾಗೂ ವಾರ್ಡ್ ಸ.ಅ. ರವರು ಕಾಮಗಾರಿಯು ನಿರಂತರ ಮಳೆಯಿಂದಾಗಿ ಸ್ವಲ್ಪ ನಿಧಾನ ಗತಿಯಲ್ಲಿ ಚಾಲ್ತಿಯಲ್ಲಿರುತ್ತದೆ. ಮಳೆ ನಿಂತ ನಂತರ ಟಾರ್ ಹಾಕುವ ಕಾಮಗಾರಿಯ ಕೆಲಸವನ್ನು ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.

5. ಪಶ್ಚಿಮ ಕಾರ್ಡ್ ರಸ್ತೆಯಲ್ಲಿರುವ ಎರಡು ಶೌಚಾಲಯಗಳನ್ನು ಘನತ್ಯಾಜ್ಯ ವಿಭಾಗಕ್ಕೆ ಹಸ್ತಾಂತರಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಇದಕ್ಕೆ ಉತ್ತರವಾಗಿ ವಾರ್ಡಿನ ಸಹಾಯಕ ಅಭಿಯಂತರರು ಶೌಚಾಲಯಕ್ಕೆ ಸಂಬಂಧಪಟ್ಟಂತೆ ವಿದ್ಯುತ್ ಸಂಪರ್ಕ ಕಲ್ಪಿಸಲು ಮೀಟರ್ ಚಾರ್ಜಸ್ ಪಾವತಿಸುವುದಕ್ಕೆ ಬೆಸ್ಕಾಂ ಕಡೆಯಿಂದ ಅಂದಾಜು ಪಟ್ಟಿ ಪಡೆದು, ಬಿ.ಬಿ.ಎಂ.ಪಿ. ಹಣಕಾಸು ರವರಿಗೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಸಭೆಯಲಿ ತಿಳಿಸಿದರು.

6. ರಾಜಾಜಿನಗರ ವಿಧಾನ ಸಭಾ ಕ್ಷೇತ್ರದ ಶಾಸಕರು, ವಾರ್ಡ್ ವ್ಯಾಪ್ತಿಯಲ್ಲಿ ವಾಹನಗಳ ಚಾಲಕರುಗಳಿಲ್ಲದೇ ಅನಧಿಕೃತವಾಗಿ ವಾಹನಗಳನ್ನು ನಿಲುಗಡೆ ಮಾಡುವ ಬಗ್ಗೆ ಸೂಕ್ತ ಕ್ರಮ ಜರುಗಿಸುವಂತೆ ಸಂಚಾರಿ ಆರಕ್ಷಕರು ರವರಿಗೆ ಸಭೆಯಲ್ಲಿ ಸೂಚಿಸಿದರು.

7. ಮಾನ್ಯ ಶಾಸಕರು ಪಿ ಅಂಡ್ ಟಿ ರಸ್ತೆಯಲ್ಲಿ ಕಸ ಹಾಕಿರುವ ಬಗ್ಗೆ, ಘನತ್ಯಾಜ್ಯ ವಿಭಾಗ ಅಧಿಕಾರಿಗಳ ಜೊತೆ ಚರ್ಚಿಸಿ, ಅದಕ್ಕೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಇದಕ್ಕೆ ಉತ್ತರವಾಗಿ ಘನತ್ಯಾಜ್ಯ ವಿಭಾಗದ ಅಧಿಕಾರಿ ಸದರಿ ಸ್ಥಳದಲ್ಲಿ ಅನುಪಯುಕ್ತ ವಾಹನಗಳನ್ನು ನಿಲ್ಲಿಸಿದ್ದು, ಅದರ ಪಕ್ಕದಲ್ಲಿಯೇ ಸಾರ್ವಜನಿಕರು ಕಸ ಹಾಕುತ್ತಿದ್ದು, ವಾಹನಗಳನ್ನು ತೆರವುಗೊಳಿಸಿದಲ್ಲಿ, ಅಲ್ಲಿ ಬಿದ್ದಿರುವ ಕಸವನ್ನು ತೆರವುಗೊಳಿಸಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.

8. ವಾರ್ಡಿನ ಸದಸ್ಯರಾದ ಶ್ರೀ ಆನಂದ್ ರವರು ಸಮಾಜ ಕಲ್ಯಾಣ ಇಲಾಖೆ ಮತ್ತು ಆಹಾರ ಇಲಾಖೆಯ ಅಧಿಕಾರಿಗಳು ಸಭೆಗೆ ಗೈರು ಹಾಜರಾದ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದರು ಇದಕ್ಕೆ ಉತ್ತರವಾಗಿ ನೋಡಲ್ ಅಧಿಕಾರಿಗಳು ಮುಂದಿನ ಸಭೆಯಲ್ಲಿ ಹಾಜರಾಗುವಂತೆ ತಿಳಿಸುವಂತೆ ವಾರ್ಡಿನ ಅಭಿಯಂತರರಿಗೆ ತಿಳಿಸಿದರು.

9. ವಾರ್ಡಿನ ಸದಸ್ಯರಾದ ಶ್ರೀ ಆನಂದ್, ಶ್ರೀ ಸುರೇಶ್ ಗುಡಗೋಳಿ, ಶ್ರೀ ಉಮೇಶ್ ಹಾಗೂ ಇತರರು ವಾರ್ಡಿನ ಕೆಲವು ರಸ್ತೆಗಳಲ್ಲಿ ಬೀದಿ ದೀಪಗಳ ಉರಿಯುತ್ತಿಲ್ಲವೆಂದು ಸಭೆಯಲ್ಲಿ ಚರ್ಚಿಸಿದರು. ಇದಕ್ಕೆ ಉತ್ತರವಾಗಿ ಮಾನ್ಯ ಶಾಸಕರು , ವಿದ್ಯುತ್ ಅಭಿಯಂತರರು ಹಾಗು ಗುತ್ತಿಗೆದಾರರಿಗೆ ಬೀದಿ ದೀಪಗಳ ಸಮಸ್ಯೆಯನ್ನು ಪರಿಹರಿಸುವಂತೆ ಸೂಚಿಸಿದರು.

10. ಮಾನ್ಯ ಶಾಸಕರು ಆರೋಗ್ಯಾಧಿಕಾರಿಗಳ ಜೊತೆ ಕೋವಿಡ್ 3ನೇ ಅಲೆಯ ಬಗ್ಗೆ ಚರ್ಚಿಸಿದರು. ಹಾಗೂ 3ನೇ ಅಲೆಯ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವಂತೆ ಸಭೆಯಲ್ಲಿ ತಿಳಿಸಿದರು. ಇದಕ್ಕೆ ಉತ್ತರವಾಗಿ ಈಗಾಗಲೇ ಸಾರ್ವಜನಿರಿಗೆ ಅರಿವು ಮೂಡಿಸಲಾಗುತ್ತಿರುತ್ತದೆ. ಹಾಗೇ ಕೋವಿಡ್ ವ್ಯಾಕ್ಸಿನೇಷನ್ ಶೇ. 98% ಆಗಿದೆ ಎಂದು ಸಭೆಗೆ ತಿಳಿಸಿದರು.

11. ಶ್ರೀ ಕುಬೇರ್, ಪಿ.ಎಸ್.ಐ. ಬಸವೇಶ್ವರನಗರ ಇವರು ತಮ್ಮ ಠಾಣಾ ವ್ಯಾಪ್ತಿಯಲ್ಲಿ ಸಿ.ಸಿ. ಟಿ.ವಿ. ಕ್ಯಾಮರಗಳು ಚಾಲ್ತಿಯಲ್ಲಿ ಇಲ್ಲದೇ ಇರುವ ಬಗ್ಗೆ ಸಭೆಯಲ್ಲಿ ಚರ್ಚಿಸಿದರು. ಇದಕ್ಕೆ ಉತ್ತರವಾಗಿ ಮಾನ್ಯ ಶಾಸಕರು ಸಿ.ಸಿ. ಕ್ಯಾಮರಗಳ ನಿರ್ವಹಣೆಯ ಬಗ್ಗೆ ಕ್ರಮ ಕೈಗೊಳ್ಳುಂತೆ ಸಭೆಯಲ್ಲಿ ಸೂಚಿಸಿದರು.

12. ವಾರ್ಡಿನ ಸದಸ್ಯರು, ಶಿವನಹಳ್ಳಿ ಮೇಲು ಸೇತುವೆ ಮೇಲೆ ಅಪಘಾತಗಳು ಸಂಭವಿಸುತ್ತಿದ್ದು, ಅದಕ್ಕೆ ರಸ್ತೆ ಅಡೆ ತಡೆಗಳನ್ನು ಹಾಕಲು ಪ್ರಸ್ತಾಪಿಸಿದರು. ಇದಕ್ಕೆ ಉತ್ತರವಾಗಿ ಮಾನ್ಯ ಶಾಸಕರು ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಸೂಚಿಸಿದರು.

13. ವಾರ್ಡಿನ ಸದಸ್ಯರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಚೇಂಬರ್ಸ್‌ಗಳಿಂದ ಮಳೆಗಾಲದಲ್ಲಿ ತುಂಬಿ ಹರಿಯುತ್ತಿದ್ದು, ನೀರು ರಸ್ತೆಯ ಮೇಲೆ ಬಂದು ಶೇಖರಣೆಯಾಗಿ ಸಾರ್ವಜನಿಕರಿಗೆ ತೊಂದರೆ ಹಾಗೂ ರಸ್ತೆಗಳು ಹಾಳಾಗುತ್ತಿರುವ ಬಗ್ಗೆ ಚರ್ಚಿಸಿದರು. ಇದಕ್ಕೆ ಉತ್ತರವಾಗಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅಭಿಯಂತರರು ರವರು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

14. ವಾರ್ಡ್ ವ್ಯಾಪ್ತಿಯಲ್ಲಿ ಬರುವ ಕೆಲವು ರಸ್ತೆಗಳಲ್ಲಿ ಗುಂಡಿ ಬಿದ್ದಿದ್ದು, ಅವುಗಳನ್ನು ಮುಚ್ಚುವಂತೆ ಸಭೆಯಲ್ಲಿ ಚರ್ಚಿಸಿದರು. ಇದಕ್ಕೆ ಉತ್ತರವಾಗಿ ವಾರ್ಡಿನ ಅಭಿಯಂತರರಿಗೆ ಗುಂಡಿ ಬಿದ್ದಿರುವ ರಸ್ತೆಗಳನ್ನು ಮುಚ್ಚುವಂತೆ ಮಾನ್ಯ ಶಾಸಕರು ಹಾಗೂ ನೋಡಲ್ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

15. ಸಮಾನ್ಯ ಶ್ರೀ ಎಸ್.ಸುರೇಶ್ ಕುಮಾರ್, ರಾಜಾಜಿನಗರ ಶಾಸಕರು ರವರು ಮಹಾತ್ವಾಂಕ್ಷಿ ವಾರ್ಡ್ ಕಮಿಟಿ ಸಭೆಗೆ ಪ್ರತಿ ಸಭೆಗೆ ಹಾಜರಾಗಿ ಮುಂದಿನ ದಿನಗಳಲ್ಲಿ ಉದ್ಭವಿಸಬಹುದಾದ ಯೋಜನೆಗಳನ್ನು ಪರಿಣಾಮಕಾರಿಯಾಗಿ ನಡೆಸಿಕೊಂಡು ಹೋಗಲು ಸೂಚಿಸಿರುತ್ತಾರೆ.

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರಿಗೆ ವಾರ್ಡ್ ಸಮಿತಿ ಸದಸ್ಯರುಗಳಿಗೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 99